**ಅಸಲು ದಾವಾ ಸಂಖ್ಯೆ 239/2026**

**ಪಿ.ಡಬ್ಲ್ಯೂ-1**

**ದಿಃ 16-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ SKP ವಕೀಲರಿಂದಃ-**

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ದಿಃ 11.07.2026 ರ ಪ್ರಜಾವಾಣಿ ಕನ್ನಡ ದಿನಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ7 ಎಂದು, ಪ್ರಕಟಣೆಯ ಭಾಗವನ್ನು ನಿಪಿಃ7(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯ ತಂದೆಯ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ8 ಎಂದು ಗುರುತಿಸಲಾಯಿತು.

2ನೇ ವಾದಿಯ ಆಧಾರ್ ಕಾರ್ಡ್, ಪಾನ್ ಕಾರ್ಡ್ ಹಾಗೂ ಶಾಲಾ ವರ್ಗಾವಣೆ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿಃ9 ರಿಂದ ನಿಪಿಃ11 ಎಂದು ಗುರುತಿಸಲಾಯಿತು.

2ನೇ ಪ್ರತಿವಾದಿಯ ಸಂಸ್ಥೆಯವರು 2ನೇ ವಾದಿಗೆ ನೀಡಿದ ಹಿಂಬರಹವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ12 ಎಂದು ಗುರುತಿಸಲಾಯಿತು.

ಬೆಳಗಾವಿಯ ಬೆಂಡಿಗೇರಿ ಗ್ರಾಮದ ಸರ್ವೆ ನಂ.159*/2 ರ 5 ಪುಟಗಳ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ13 ಎಂದು ಗುರುತಿಸಲಾಯಿತು.

ಬೆಳಗಾವಿಯ ಬೆಂಡಿಗೇರಿ ಗ್ರಾಮದ ಸರ್ವೆ ನಂ.196*/* ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ14ಎಂದು ಗುರುತಿಸಲಾಯಿತು.

ಬೆಳಗಾವಿಯ ಬೆಂಡಿಗೇರಿ ಗ್ರಾಮದ ಸರ್ವೆ ನಂ.160*/2 ರ 5 ಪುಟಗಳ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ15 ಎಂದು ಗುರುತಿಸಲಾಯಿತು.

ಬಡಸಗೆ ಗ್ರಾಮ ಪಂಚಾಯಿತಿಯವರ ಪಿಡಿಓ ರವರು ನೀಡಿರುವ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿಃ16 ಎಂದು ಗುರುತಿಸಲಾಯಿತು.

**ಅಸಲು ದಾವಾ ಸಂಖ್ಯೆ 239/2026**

**ಪಿ.ಡಬ್ಲ್ಯೂ-1**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಎಡಿಜಿಪಿ ರವರಿಂದಃ</u>**

ನಾನು ಮುತ್ನಾಳ ಗ್ರಾಮದಲ್ಲಿ ವಾಸವಿರುತ್ತೇನೆ. ಶ್ರೀ ಮಲ್ಲಪ್ಪ ಲಂಗೋಟಿ ರವರು ನನ್ನ ತಂದೆ. ಶ್ರಿಮತಿ ಕಮಲವ್ವ ನನ್ನ ತಾಯಿ. ನನ್ನ ತಂದೆ-ತಾಯಿಗೆ ಇಬ್ಬರು ಮಕ್ಕಳು, ನಾನು ಹಾಗೂ ನನ್ನ ಅಣ್ಣ ಸುರೇಶ. ನಾನು ವಾದಪತ್ರದಲ್ಲಿ ಶ್ರೀ ಮಲ್ಲಪ್ಪ ಲಂಗೋಟಿ ರವರಿಗೆ ನಾವು ವಾದಿಯರಷ್ಟೇ ವಾರಸುದಾರರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಂದೆ ದಿಃ20.10.2024 ರಂದು ಮೃತಪಟ್ಟಿರುತ್ತಾರೆ. ನನಗೆ 2ನೇ ಪ್ರತಿವಾದಿಯ ಬಳಿ ಹೋಗಿ ನನ್ನ ತಂದೆಯ ವಾರಸಾ ಪ್ರಮಾಣ ಪತ್ರವನ್ನು ಪಡೆಯಲು ಯಾವುದಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಸದರಿಯವರು ನನಗೆ ವಾರಸಾ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯು ನಾವು ನನ್ನ ತಾಯಿಯ ಸರಿಯಾದ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂಬುವ ಕಾರಣಕ್ಕಾಗಿ ನಮಗೆ ವಾರಸಾ ಪ್ರಮಾಣ ಪತ್ರವನ್ನು ಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ನನ್ನ ತಂದೆಯ ಹೆಸರಿನಲ್ಲಿ 2 ½ ಎಕರೆ ಹೊಲ ಹಾಗೂ ಒಂದು ಮನೆ ಇರುತ್ತದೆ. ನನ್ನ ತಂದೆಗೆ ಬೇರ ವಾರಸುದಾರರು ಇದ್ದು, ನಾನು ನಾವು ವಾದಿಯರಷ್ಟೇ ಅವರ ವಾರಸುದಾರರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**